ಅಸಂಖ್ಯಾತವಾದರೂ ಸಾಮಾನ್ಯ ಆಸಕ್ತಿಗಾಗಿ ನಾವು ನಾಲ್ಕು ಅಂಶಗಳನ್ನು ಮಾತ್ರ ಸ್ಥೂಲವಾಗಿ ಗಮನಿಸೋಣ: ಶನಿ ಗ್ರಹ, ಅದರ ಸುಂದರ ಉಂಗುರಗಳು ಮತ್ತು ಅದರ ಉಪಗ್ರಹಗಳಾದ ಟೈಟನ್ ಮತ್ತು ಎನ್ಸಲಡಸ್ ಕುರಿತು ದೊರೆತ ವಿಸ್ಮಯಕಾರಿ ಮಾಹಿತಿ.

ಶನಿ ಮತ್ತು ಭೂಮಿ ಹಲವು ರೀತಿಯಲ್ಲಿ ಭಿನ್ನವಾಗಿದ್ದರೂ ಎರಡೂ ಗ್ರಹಗಳಲ್ಲಿ ಕೆಲವು ಸಾಮ್ಯವೂ ಇವೆ. ಭೂಮಿಯ ರೀತಿಯಲ್ಲಿಯೇ ಶನಿಯ ಸ್ವಯಂಭ್ರಮಣೆಯ ಅಕ್ಷವು ಓರೆಯಾಗಿದೆ. ಇಲ್ಲಿಯೂ ಋತುಗಳಿವೆ. ಆದರೆ ಶನಿಯ ಸೂರ್ಯನ ಸುತ್ತ ಇದರ ಪರಿಭ್ರಮಣೆಯ ಅವಧಿ 30 ವರ್ಷವಾದ್ದರಿಂದ ಒಂದೊಂದು ಋತುವೂ ಭೂಮಿಯ ಲೆಕ್ಕದ ಏಳೂವರೆ ವರ್ಷದಷ್ಟು ದೀರ್ಘವಾಗಿರುತ್ತದೆ.

ಶನಿಯಲ್ಲಿ ಪ್ರತಿ 28– 30 ವರ್ಷಕ್ಕೊಮ್ಮೆ ಒಂದು ಬೃಹತ್ ಬಿರುಗಾಳಿ ಬೀಸುತ್ತದೆ. ಅದರ ಲೆಕ್ಕದಲ್ಲಿ ಇದು ವಾರ್ಷಿಕ ವಿದ್ಯಮಾನ. ಆದರೆ ಅತ್ಯಾಶ್ಚರ್ಯಕರ ಆದರೂ ಸತ್ಯವಾದ ಒಂದು ಸಂಗತಿಯೆಂದರೆ ಈ ಬಾರಿ ಬಿರುಗಾಳಿಯು ಹತ್ತು ವರ್ಷ ಮುಂಚೆಯೇ ಬಂತು, ಕ್ಯಾಸಿನಿಗೆ ಇದರ ಅಧ್ಯಯನಕ್ಕಾಗಿ ಅತ್ಯಂತ ಪ್ರಶಸ್ತವಾದ ಅವಕಾಶವನ್ನು ಒದಗಿಸಿತು. ಡಿಸೆಂಬರ್ 2010ರಲ್ಲಿ ಸುಮಾರು 8 ತಿಂಗಳ ಕಾಲ ಬೀಸಿದ ಒಂದು ಪ್ರಚಂಡ ಬಿರುಗಾಳಿ ಕ್ಯಾಸಿನಿಯ ಕಣ್ಣಿಗೆ ಬಿದ್ದಿತು. ಇದು ಶನಿಯ ಸುತ್ತ ಸುಮಾರು 3,00,000 ಕಿ.ಮೀ. ನಷ್ಟು ದೂರದ ವರೆಗೆ ಕ್ರಮಿಸಿತು. ಗ್ರೇಟ್ ವೈಟ್ ಸ್ಪಾಟ್ ಎಂದು ಕರೆಯಲಾಗುವ ಶನಿಯ ಋತುಮಾನದ ಬಿರುಗಾಳಿ ಮೋಡಗಳ ಮೇಲ್ಭಾಗಕ್ಕಿಂತ 160 ಕಿ.ಮೀ. ನಷ್ಟು ಆಳದಿಂದ ನೀರಿನ ಆವಿಯನ್ನು ಮತ್ತು ಇತರ ದ್ರವ್ಯಗಳನ್ನು ಮೇಲಕ್ಕೆ ಚಿಮ್ಮುತ್ತದೆ. ಆವಿಯು ತನ್ನ ಮೇಲ್ಮುಖ ಪಯಣದ ಹೊತ್ತಿನಲ್ಲಿ ಹೆಪ್ಪುಗಟ್ಟುತ್ತದೆ. ಬಿರುಗಾಳಿಗೆ ಬಿಳಿ ಬಣ್ಣ ಬಂದಿರುವುದು ಇದರಿಂದಾಗಿಯೇ.

ಈ ಬಿರುಗಾಳಿಯಲ್ಲಿ ಕ್ಯಾಸಿನಿಗೆ ಬೆಳಕಿನ ಮಿಂಚುಗಳು ಗೋಚರಿಸಿದವು. ಇವು ಭೂಮಿಯ ಮೇಲೆ ಉಂಟಾದ ಅತ್ಯಂತ ಶಕ್ತಿಯುತ ಮಿಂಚಿಗೆ ಸಮನಾಗಿದ್ದವು. ಶನಿಯ ಹಗಲು ಬದಿಯಲ್ಲಿಯೂ ಬೆಳಕು ಭೂಮಿಯಲ್ಲಿದ್ದಷ್ಟು ಪ್ರಖರವಾಗಿರುವುದಿಲ್ಲ. ಹೀಗಾಗಿ ಹಗಲು ಹೊತ್ತಿನಲ್ಲಿಯೂ ಶನಿಯಲ್ಲಿ ಮಿಂಚನ್ನು ಕಂಡದ್ದು ಇದೇ ಮೊದಲ ಸಲ. ಕ್ಯಾಸಿನಿ ಉಪಕರಣವು ಬಹಳ ದೂರದಿಂದಲೇ ಶನಿಯಲ್ಲಿ ಮಿಂಚುಗಳು ಗುಡುಗಿದ್ದನ್ನು ಕೇಳಿಸಿಕೊಂಡಿತ್ತು. 2009ರಲ್ಲಿ ಕ್ಯಾಮರಾಗಳು ಶನಿಯ ಮಿಂಚುಗಳನ್ನು ಮೊಟ್ಟಮೊದಲ ಬಾರಿಗೆ ಚಿತ್ರಗಳಲ್ಲಿ ಸೆರೆಹಿಡಿದಿವೆ. ಕ್ಯಾಸಿನಿ ವಿಜ್ಞಾನಿಗಳು ಈ ಚಿತ್ರಸರಣಿಯನ್ನೇ ಆಧರಿಸಿ



## ಶಾಸ್ತ್ರ ಮತ್ತು ವಿಜ್ಞಾನದಲ್ಲಿ ಶನಿ

'ಓಂ ನಮಃ ಸೂರ್ಯಾಯ, ಚಂದ್ರಾಯ, ಮಂಗಳಾಯ, ಬುಧಾಯ ಚ ಗುರು ಶುಕ್ರ ಶನಿಭ್ಯಶ್ಚ ರಾಹವೇ ಕೇತವೇ ನಮಃ ' ಎಂಬುದು ನವಗ್ರಗಳ ಪಟ್ಟಿಯನ್ನು ಮಾಡುವ ಮಂತ್ರ. ಇದರ ಪ್ರಕಾರ, ನಕ್ಷತ್ರವಾದ ಸೂರ್ಯ ಮತ್ತು ಭೂಮಿಯ ಉಪಗ್ರಹವಾದ ಚಂದ್ರಗಳೂ ಗ್ರಹಗಳ ಪಟ್ಟಿಯಲ್ಲಿ ಸೇರಿವೆ. ಭೂಮಿಯೇ ಪತ್ತೆ ಇಲ್ಲ. ವಿಶ್ವದಲ್ಲಿ ಎಲ್ಲಿಯೂ ಅಸ್ತಿತ್ವದಲ್ಲಿಲ್ಲದ ರಾಹು ಮತ್ತು ಕೇತು ಎಂಬವು ಗ್ರಹಗಳಾಗಿವೆ. ಯುರೆನಸ್, ನೆಪ್ಚೂನ್ ಗ್ರಹಗಳೂ ಇಲ್ಲಿಲ್ಲ. ಸೂರ್ಯ ಒಂದು ನಕ್ಷತ್ರ, ಮತ್ತು ಸೌರವ್ಯೂಹದ ಕೇಂದ್ರ ಎಂಬ ಪರಿಕಲ್ಪನೆ ಇಲ್ಲಿಲ್ಲ. ಆದ್ದರಿಂದ ಪಟ್ಟಿಯಲ್ಲಿ ಇರುವ ಗ್ರಹಗಳೂ ನೈಸರ್ಗಿಕ ಅನುಕ್ರಮದಲ್ಲಿಲ್ಲ. ಆದರೆ, ವಾರದ ದಿನಗಳಲ್ಲಿ ಈ ಅನುಕ್ರಮ ಸೂಚಿತವಾಗಿದೆ: ಭಾನುವಾರ(ಸೂರ್ಯ), ಸೋಮವಾರ(ಚಂದ್ರ), ಮಂಗಳವಾರ, ಬುಧವಾರ, ಗುರುವಾರ, ಶುಕ್ರವಾರ ಮತ್ತು ಶನಿವಾರ. ಇಲ್ಲಿಯೂ ರಾಹು ಮತ್ತು ಕೇತುಗಳಿಗೆ ಸ್ಥಾನವಿಲ್ಲ. ಆದರೆ ನಮಗೀಗ ಗೊತ್ತಿರುವ ವಾಸ್ತವ ಇರುವುದು ಹೀಗೆ: ಸೂರ್ಯನಿಂದ ದೂರ ಸರಿದ ಹಾಗೆ ಬುಧ, ಶುಕ್ರ, ಭೂಮಿ, ಮಂಗಳ, ಗುರು, ಶನಿ, ಯುರೆನಸ್, ನೆಪ್ಚೂನ್ ಇವು ಸೂರ್ಯನ ಅಷ್ಟ ಗ್ರಹಗಳು.

ಪ್ರಾಚೀನ ಭಾರತ ಖಗೋಳಶಾಸ್ತ್ರದಲ್ಲಿ ಜಗತ್ತಿಗೇ ಮಹತ್ವದ ಕೊಡುಗೆಗಳನ್ನು ಕೊಟ್ಟಿರುವ ನಾಗರಿಕತೆ. ಆಗ ಭೂಮಿಯ ನೆಲೆಯಿಂದ ಬರಿಗಣ್ಣಿನಿಂದ ನೋಡಿ, ವರ್ಷಗಟ್ಟಲೆ ಮಾಡಿದ ಶಾಸ್ತ್ರೀಯ ಅವಲೋಕನಗಳನ್ನು ದಾಖಲಿಸುತ್ತಿದ್ದರು. ಗ್ರಹ ನಕ್ಷತ್ರಗಳ ಈಗಿನ ಚಲನವಲನಗಳ ಲೆಕ್ಕಾಚಾರದಿಂದ ಅವು ಮುಂದೆ ಹೇಗೆ ವರ್ತಿಸುತ್ತವೆ ಎಂದು ಮುನ್ನುಡಿಯುತ್ತಿದ್ದರು. ನಿಯತಕಾಲಿಕವಾಗಿ ನಡೆಯುವ ವಿದ್ಯಮಾನಗಳ ದಾಖಲೆಗಳನ್ನು ಆಧರಿಸಿ ಭೂಮಿಯ ಮೇಲೆ ಆಗುವ ಋತುಗಳು, ಮಳೆ, ಗ್ರಹಣಗಳು, ಸಂಕ್ರಮಣಗಳು ಇತ್ಯಾದಿಗಳನ್ನು ಮುಂದಾಗಿಯೇ ಹೇಳತೊಡಗಿದರು. ಇದರಿಂದ ಕೃಷಿ ಮತ್ತು ಇತರ ವೃತ್ತಿಗಳಿಗೆ ಪ್ರಯೋಜನವಾಗುತ್ತಿತ್ತು.

ಕ್ರಮೇಣ ಇವರಲ್ಲಿ ಕೆಲವರು ಇದನ್ನೇ ದೈನಂದಿನ ವೃತ್ತಿಯ ಮಾರ್ಗವನ್ನಾಗಿ ಮಾಡಿಕೊಂಡರು. 'ಆಕಾಶದಲ್ಲಿ ನಡೆಯುವ ಸೂರ್ಯಚಂದ್ರಾದಿ ಗ್ರಹನಕ್ಷತ್ರಗಳ ಸ್ಥಾನ, ಚಲನವಲನಗಳಿಂದ ಭೂಮಿಯ ಮೇಲೆ ಒಟ್ಟಾಗಿ ಅಲ್ಲ, ಒಬ್ಬೊಬ್ಬ ವ್ಯಕ್ತಿಯ ಮೇಲೆ ಅವು ಹೇಗೆ ಶುಭ ಮತ್ತು ಅಶುಭವನ್ನು ಮಾಡಬಲ್ಲವು' ಎಂದು ಶಾಸ್ತ್ರ ಹೇಳತೊಡಗಿದರು. ಅಲ್ಲಿಂದೀಚೆಗೆ, ಆಸ್ಟ್ರಾನಮಿ (ಖಗೋಳ ವಿಜ್ಞಾನ) ಮತ್ತು ಆಸ್ಟ್ರಾಲಜಿ (ಜ್ಯೋತಿಶ್ಯಾಸ್ತ್ರ) ಎರಡೂ ಪ್ರಚಲಿತವಿದ್ದರೂ ಅವುಗಳಿಗೆ ಒಂದಕ್ಕೊಂದು ಸಂಬಂಧವಿಲ್ಲ. ಜ್ಯೋತಿಶ್ಶಾಸ್ತ್ರವನ್ನು ಖಗೋಳವಿಜ್ಞಾನಿಗಳು ಸಂಪೂರ್ಣವಾಗಿ ಅವೈಜ್ಞಾನಿಕವೆಂದು ತಿರಸ್ಕರಿಸುತ್ತಾರೆ. ಆದರೆ ಚತುರ ಜ್ಯೋತಿಷಿಗಳು ಪ್ರಾಯೋಗಿಕವಾಗಿ ಸಾಧಿಸಿ ತೋರಿಸಲಾಗದ, ಕಾರ್ಯಕಾರಣ ಸಂಬಂಧವಿಲ್ಲದ ಫಲಭವಿಷ್ಯಕ್ಕೆ ಆಧಾರ ಖಗೋಳವಿಜ್ಞಾನವೇ ಎಂದು ಸುಳ್ಳು ಹೇಳಿ ಮೋಸ ಮಾಡುತ್ತಿದ್ದಾರೆ.

ಅದಕ್ಕೆಲ್ಲ ಅವರು ಅರೆಬರೆಯಾಗಿ ಬಳಸುವುದು ಖಗೋಳ ವಿಜ್ಞಾನದಲ್ಲಾದ ಆವಿಷ್ಕಾರಗಳನ್ನು ಮತ್ತು ಆ ತಾಂತ್ರಿಕ ಭಾಷೆಯ ಪದಗಳನ್ನು. ಟಿವಿ ಕಾರ್ಯಕ್ರಮಗಳಲ್ಲಿ ಹಿನ್ನೆಲೆಯಲ್ಲಿ ಬಳಸುವುದು ಹಬಲ್ ದೂರದರ್ಶಕ ಒದಗಿಸಿರುವ ತೀರಾ ಇತ್ತೀಚಿನ ಗ್ಯಾಲಕ್ಸಿಗಳ ಚಿತ್ರಗಳನ್ನು. ಹೀಗಾಗಿ ಜನ ಇದೂ ಒಂದು ವಿಜ್ಞಾನ ಎಂದು ನಂಬಿಬಿಡುವ ಅಪಾಯವಿದೆ.